ಪತ್ತೆದಾರಿ ಕತೆ

ರವಿರಾಜ ಬೈಕಂಪಾಡಿ

ಕಲೆ: ಮುರಳೀಧರ ರಾಠೋಡ್

# ವಾಕಿಂಗ್ ಸ್ಟಿಕ್

ಹಳೆಯ ಕಡತಗಳನ್ನು ಗಣಕಯಂತ್ರದಲ್ಲಿ ಪರಿಶೀಲಿಸುತ್ತಿರುವಾಗ, ಚಿಪ್ಪಿ ಪೂವಯ್ಯನ ಕುತೂಹಲಕಾರಿ ವಾಕಿಂಗ್ ಸ್ಟಿಕ್ ಪ್ರಕರಣವು ಮತ್ತೊಮ್ಮೆ ನೆನಪಿಗೆ ಬಂದಿತು. ಕರಮಚಂದನಲ್ಲಿ ವಕೀಲಗಿರಿಯಲ್ಲಿ ತೊಡಗಿಕೊಂಡ ಐದನೆಯ ವರ್ಷ ನಡೆದಂತಹ ಘಟನೆಯದು.

ಇಳಿ ಸಂಜೆಯ ಹೊತ್ತಿಗೆ ವ್ಯಕ್ತಿಯೊಬ್ಬ ಒಂದು ವಾಕಿಂಗ್ ಸ್ಟಿಕ್ ಹಿಡಿದುಕೊಂಡು ನಮ್ಮಲ್ಲಿಗೆ ಬಂದ. ಆತನ ಹೆಸರು ಸಾಬು ನಾಣಯ್ಯ. ನಮ್ಮ ಕಚೇರಿಯಿಂದ ತುಸು ದೂರದಲ್ಲಿದ್ದ ಮೆಡಿಕಲ್ ಮತ್ತು ಜನರಲ್ ಸ್ಟೋರಿನ ಮಾಲೀಕನಾತ.

"ಯಾರೋ ಒಬ್ಬ ಗಿರಾಕಿ ಇದನ್ನು ನಮ್ಮಲ್ಲಿ ಬಿಟ್ಟು ಹೋಗಿದ್ದಾನೆ. ಅಲ್ಲ... ಬದಲಿಸಿಕೊಂಡು ಹೋಗಿದ್ದಾನೆ! ಮಧ್ಯಾಹ್ನ ಮೂರರ ಹೊತ್ತಿಗೆ ಬಂದಿದ್ದ ಆತ. ಯಾವುದೋ ಔಷಧಿ ಖರೀದಿಸಿ ಹೋಗುವಾಗ ಗಡಿಬಿಡಿಯಲ್ಲಿ ತನ್ನ ವಾಕಿಂಗ್ ಸ್ಟಿಕ್ ಬಿಟ್ಟು, ಆ ಹೊತ್ತಿಗೆ ಅಲ್ಲಿದ್ದ ಇನ್ನೊಬ್ಬ ಹಿರಿಯರ ವಾಕಿಂಗ್ ಸ್ಟಿಕ್ ಎತ್ತಿಕೊಂಡು ಹೋಗಿದ್ದಾನೆ. ಆ ಹಿರಿಯರು ಮಾತ್ರ ಆತನ ವಾಕಿಂಗ್ ಸ್ಟಿಕ್ ಕೊಂಡು ಹೋಗದೆ, ಆತ ಮರಳಿಸಿಯಾನು ಎಂದು ಭಾವಿಸಿ, ಬಂದರೆ ತಿಳಿಸಲು ಹೇಳಿ ಹೋಗಿದ್ದಾರೆ. ಆದರೆ ಆ ಗಿರಾಕಿ ಗಂಟೆ ಏಳಾದರೂ ಹಿಂದೆ ಬಂದಿಲ್ಲ. ನೀವು ಭಾರೀ ದೊಡ್ಡ ಪತ್ತೆದಾರರಂತ ಕೇಳಿದ್ದೇನೆ. ಈ ವಾಕಿಂಗ್ ಸ್ಟಿಕ್ ನೋಡಿ ಮಾಲೀಕ ಯಾರೆಂದು ಹೇಳಬಹುದೇ?" ಒಂದೇ ಉಸುರಿಗೆ ವಿವರ ನೀಡಿ, ವಾಕಿಂಗ್ ಸ್ಟಿಕ್ಕನ್ನು ನಮ್ಮೆದುರು ಹಿಡಿದ ನಾಣಯ್ಯ

"ಅಂತಹ ಪವಾಡವೇನೂ ನಾವು ಮಾಡೋಲ್ಲ, ನಾಣಯ್ಯ! ಆದರೂ ಏನಾದರೂ ಊಹಿಸಲಿಕ್ಕೆ ಆಗುತ್ತಾ ಪ್ರಯತ್ನಿಸೋಣ." ಹಾಗೆಂದು ಕರಮಚಂದ ವಾಕಿಂಗ್ ಸ್ಟಿಕ್ಕನ್ನು ಎತ್ತಿಕೊಂಡ.

ಅದೊಂದು ಬೆಲೆಬಾಳುವ, ಮರದ ವಾಕಿಂಗ್ ಸ್ಟಿಕ್. ಚಿನ್ನದ ರಂಗಿನ ಹಿಡಿ.

"ಬಿದ್ದಪ್ಪ, ನಿನಗೇನಾದರೂ ಊಹನೆ ಮಾಡೋಕೆ ಆಗುತ್ತಾ?" ಕರಮಚಂದ ನನ್ನತ್ತ ಅದನ್ನು ಚಾಚಿದ.

"ವಾಕಿಂಗ್ ಸ್ಟಿಕ್ಕಿನಿಂದ ಏನು ಊಹಿಸಲು ಸಾಧ್ಯ?" ನಿರಾಶೆಯಿಂದಲೇ ನಾನು ಅದನ್ನು ಪರಿಶೀಲಿಸಿದೆ.

"ಇದನ್ನು ತಿತ್ತೀರ ಮಾಚಯ್ಯ ಅನ್ನುವವನು ಇದರ ಮಾಲೀಕನಿಗೆ ಕೊಟ್ಟಿದ್ದಾನೆ. ಏಕೆಂದರೆ ಇಲ್ಲಿ, ಹಿಡಿಯ ಕೆಳಗಡೆ, ಫ್ರಮ್ ತಿತ್ತೀರ ಮಾಚಯ್ಯ ಅಂತ ಕೆತ್ತಿದೆ. ಜೊತೆಗೆ ಒಂದು ಕಮಲ ಹಾಗೂ ನಕ್ಷತ್ರದ ಚಿತ್ರಗಳಿವೆ. ಅವುಗಳ ಅರ್ಥವೇನು ಅಂತ ಗೊತ್ತಾಗುತ್ತಿಲ್ಲ. ಇದಕ್ಕೂ ಮಿಕ್ಕಿ ನನಗೇನೂ ಹೊಳೆಯುತ್ತಿಲ್ಲ."

"ಇದನ್ನು ಉಪಯೋಗಿಸುವವನು ಶ್ರೀಮಂತ ಅಂತ ಸುಲಭವಾಗಿ ಹೇಳಬಹುದು ಯಾಕೆಂದರೆ ಇದು ದುಬಾರಿಯಾದ ವಾಕಿಂಗ್ ಸ್ಟಿಕ್."